''ಹೇತ್ಲಾಂಡಿ ಬದುಕು ನಿಂದು.''
''ಕೈಲಾಗದವನು ಮೈ ಪರಚಿಕೊಂಡಂಗೆ.''
''ಕಳ್ ನನ್ ಮಗಾ.''
''ಸಾಯಿ ಸತ್ತೋಗು ನೀನು.''

ಇತ್ಯಾದಿ ಹೆಸರುಗಳಲ್ಲಿ ಕರೆ ಬಂದಿದ್ದ ನಂಬರ್‌ಗಳನ್ನು ಸೇವ್ ಮಾಡಿಕೊಂಡಿದ್ದ. ಅವುಗಳಿಂದ ಕರೆ ಬಂದಾಗಲೆಲ್ಲಾ ಸೇವ್ ಮಾಡಿಕೊಂಡಿದ್ದ ಹೆಸರೇ ಪದೆ ಪದೇ ಕೂಗಿ ಕೊಳುತ್ತಿದ್ದದ್ದಲ್ಲದೇ... ರಿಸೀವ್ ಮಾಡಿದ ಮೇಲೂ ಮತ್ತದೇ ಬೈಗುಳಗಳು! ನಂತರ ಆ ಹೊಸ ಬೈಗುಳಗಳನ್ನೂ ಹಳೆಯದರೊಂದಿಗೆ ಸೇರಿಸಿ ಸೇವ್ ಮಾಡಿಕೊಳ್ಳತೊಡಗಿದ. ಈಗ ಫೋನ್ ರಿಂಗ್ ಆಗುವಾಗಲೂ, ರಿಸಿವ್ ಮಾಡಿದ ಮೇಲೂ... ಬೈಗುಳಗಳ ಮಹಾಪೂರ!

ಅಯ್ಯೋ ಅಯ್ಯೋ! ತಾನೇ ಏನಾಗುತ್ತಿದ್ದೇನೆ!? ಯಾರು ಇವರೆಲ್ಲಾ!? ನಾನು ಇಷ್ಟು ಕೆಟ್ಟ ವ್ಯಕ್ತಿಯೇ!? ನಾನು ಬದುಕುವುದಕ್ಕೇ ಅನರ್ಹವಾದವನೇ!!... ಎಲ್ಲವೂ ಇದರಿಂದಲೆ! ಈ ಫೋನ್ ನನಗೆ ಬೇಡವೇ ಬೇಡ, ಎಂದೂ ಅದನ್ನ ಕಿತ್ತು ಎಸೆದು, ನಿರುಮ್ಮಳವಾಗಿ ಮುಂದೆ ಸಾಗುತ್ತಾನೆ. ನಿಧಾನವಾಗಿ ಮತ್ತೇ ಅವನು ಅವನ ಲೋಕಕ್ಕೆ ಮರಳುತ್ತಿದ್ದಾನೆ. ಗಾಳಿ, ಬೆಳಕು, ನೀರು, ಬೆಟ್ಟ, ಬಯಲು ಮತ್ತು ಅವನು; ಇಷ್ಟೇ ಇವಿಷ್ಟೇ... ಹಾಗೇ ಆ ಬೆಟ್ಟದ ಅಂತ್ಯವನ್ನು ಮುಟ್ಟುತ್ತಾನೆ. ನಂತರ ಇದು ಅಂತ್ಯವಲ್ಲ; ಅನಂತ ಸಂಸಾರ ಆದಿ! ಎಂದೂ ಅವನಿಗೆ ತಿಳಿಯುತ್ತದೆ. ಅದೆಷ್ಟೋ ಸಹಸ್ರ ಕ್ಷಣಗಳನ್ನು ಅಲ್ಲಿಯೇ ಕಳೆದು ನಂತರ ಕೆಳಗೆ ಇಳಿದು ಬರುತ್ತಾನೆ. ಈಗ ಅವನಿಗೆ ತನ್ನವರು ಯಾರು ಎಂಬುದು ಅಥವಾ ಈ ಹಿಂದೆ ತನ್ನ ಬಳಿಯೊಂದು ಮೊಬೈಲ್ ಫೋನ್ ಇತ್ತು, ಅದಕ್ಕೆ ಎಷ್ಟೋ ಕರೆಗಳು ಬರುತ್ತಿತ್ತು... ಕರೆ ಮಾಡಿದವರೆಲ್ಲಾ ಬೈಯುತ್ತಿದ್ದರು... ಇತ್ಯಾದಿ ಯಾವ ನೆನಪುಗಳೂ ಇಲ್ಲ!

ಅವನು ಬರುವುದನ್ನೇ ಕಾದಂತಿದ್ದ ಎಷ್ಟೋ ಜನ ತಮ್ಮ ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದು ಕಾದು ಕೂತಿದ್ದವರು ಅವನನ್ನು ಕಂಡೊಡನೆಯೇ ಮೇಲೆದ್ದು, ಕೂಗುತ್ತಾ ಅವನೆಡೆ ಬರತೊಡಗಿದರು. ಅವರ ವಿಕಾರ ಮುಖಗಳನ್ನು ಕಂಡು ಹೆದರಿದ ಇವನಿಗೇನನ್ನಿಸಿತೋ... ಮತ್ತೆ ಹಿಂತಿರುಗಿ ಬೆಟ್ಟವನ್ನು ಹತ್ತಲು ಶುರುಮಾಡಿಬಿಟ್ಟ! ಯಾರಿಗೂ ಸಿಗದಂತಾ ವೇಗದಲ್ಲಿ ಓಡುತೊಡಗಿದ. ಈ ಬಾರಿ ಅವನ ಬಳಿ ಮೊಬೈಲ್ ಫೋನು ಕೂಡ ಇಲ್ಲ!

## ಚೈತ್ರಾ ಕೋಟೂರ್

ಪ್ರಸ್ತುತ ಸಿನಿಮಾ ಬರವಣಿಗೆ ಹಾಗೂ ನಟನೆಯಲ್ಲಿ ತೊಡಗಿಸಿಕೊಂಡಿರುವ ಚೈತ್ರಾ ರಂಗಭೂಮಿಯಿಂದ ನಟನೆಯ ಕ್ಷೇತ್ರಕ್ಕೆ ಬಂದವರು. ಅವರು ಕನ್ನಡದ ಕಿರುತೆರೆ ಧಾರಾವಾಹಿಗಳಲ್ಲೂ ನಟಿಸಿದ್ದಾರೆ. ಕವಿತೆ, ಚಿತ್ರಕಲೆ ಅವರ ಆಸಕ್ತಿಯ ಕ್ಷೇತ್ರಗಳು. ಅವರು ಯೋಗರಾಜ್ ಭಟ್ ನಿರ್ದೇಶನದ 'ಮುಗುಳುನಗೆ' ಸಿನಿಮಾದ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿದ್ದಾರೆ. ಮುಂಬರಲಿರುವ 'ಸೂಜಿದಾರ ಚಿತ್ರಕ್ಕೆ ಸಂಭಾಷಣೆ, ಗೀತ ರಚನೆ ಮಾಡಿದ್ದಾರೆ.